ಗ್ರಾಜುಯೇಟ್ ಕೋರ್ಸ್ ಆದ ಅಸಿಸ್ಟೆಂಟ್ ಸರ್ಜನ್ಸ್, ತರಬೇತಿ ಮುಗಿಸಿಕೊಂಡು ವಾಪಸು ಬರುತ್ತಾರೆ. ಅವರನ್ನು ಎಲ್ಲೆಲ್ಲಿ ವೆಕೆನ್ಸಿಗಳು ಇವೆ, ಅಲ್ಲೆಲ್ಲಾ ಫಿಲಪ್ ಮಾಡುತ್ತೇವೆ. ಮಾನ್ಯ ಗೌಡರು ಹೇಳತಕ್ಕ ೧೪ ವೆಕೆನ್ಸಿಗಳು ಏನಿವೆ ಅವು ಟಿಡಿಬಿಯವರು ನಡೆಸುತ್ತಿದ್ದ ಆಸ್ಪತ್ರೆಗಳಲ್ಲಿರತಕ್ಕ ವೆಕೆನ್ಸಿಗಳು. ಟಿಡಿಬಿ ಆಸ್ಪತ್ರೆಗಳನ್ನು ಸರ್ಕಾರ ತೆಗೆದುಕೊಂಡಿದೆ ಅವುಗಳನ್ನು ಅಪ್‌ಗ್ರೇಡ್ ಮಾಡತಕ್ಕ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಅದು ಆದ ಮೇಲೆ ಮಾನ್ಯ ಸದಸ್ಯರು ಹೇಳತಕ್ಕ ವೆಕೆನ್ಸಿಗಳನ್ನು ತುಂಬಲಿಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಎನ್. ಹೆಚ್. ಗೌಡ.— ವೈದ್ಯರನ್ನು ಹುಡುಕುವಂತಹ ಪ್ರಸಂಗ ನಮ್ಮಲ್ಲಿ ಬಂದಿದೆ. ವೈದ್ಯರನ್ನು ನಾವೇ ಹುಡುಕಿ ತಂದರೆ ಆಗಲಾವರೂ ಸರ್ಕಾರ ನೇಮಕ ಮಾಡುತ್ತದೆಯೇ ಎಂದು ಕೇಳುತ್ತೇನೆ.

ಅಧ್ಯಕ್ಷರು.— ಎಷ್ಟು ಸಾರಿ ಹೇಳಬೇಕು ನಿಮಗೆ ? ದಯವಿಟ್ಟು ಕುಳಿತುಕೊಳ್ಳಿ. ಶ್ರೀ ಸಿಂಧ್ಯಾರವರೇ ನೀವು ಅವರನ್ನು ಕರೆದು ಪಕ್ಕದಲ್ಲಿ ಕೂಡಿಸಿಕೊಂಡು ಉತ್ತರ ಹೇಳಿ.

ಶ್ರೀ ಎನ್. ಹೆಚ್. ಗೌಡ.— ಇದೊಂದು ಸಣ್ಣ ವಿಷಯ...

ಅಧ್ಯಕ್ಷರು.— ನಾನು ಶ್ರೀ ಕೆ. ಎಚ್. ಪಾಟೀಲರನ್ನು ಕರೆದಿದ್ದೇನೆ. ನೀವು ಈಗ ಕುಳಿತು ಕೊಳ್ಳಿ.

ರಾಜ್ಯದಲ್ಲಿ ವರದಕ್ಷಿಣೆ ಸಾವುಗಳು

೨೯೭೪. ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ವರದಿಯಾದ ಒಟ್ಟು ವರದಕ್ಷಿಣೆ ಸಾವುಗಳೆಷ್ಟು ?

ಆ) ಶಿಕ್ಷೆಗೊಳಗಾದ ಒಟ್ಟು ಅಪರಾಧಿಗಳೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ)

೧೯೮೬	೧೯೮೭	೧೯೮೮
೬೫	೧೦೫	೧೨೪

ಆ. ೧೯೮೬ರಲ್ಲಿ ಎರಡು ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಿದೆ.
೧೯೮೭ರ ಒಂದು ಪ್ರಕರಣದಲ್ಲಿ ಅಪರಾಧಿಗೆ ಶಿಕ್ಷೆಯಾಗಿದೆ.

ಶ್ರೀ ಕೆ. ಎಚ್. ಪಾಟೀಲ್.—ಇತ್ತೀಚೆಗೆ ತಿಪಟೂರಿನಲ್ಲಿ ಒಬ್ಬ ಡಾಕ್ಟರ್ ತನ್ನ ಹೆಂಡತಿಯನ್ನು ಕೊಂದು ಮತ್ತೊಬ್ಬ ಹೆಂಡತಿಯನ್ನು ಮಾಡಿಕೊಂಡು ಇವತ್ತಿನ ದಿವಸ ಜೀವನ ನಡೆಸುತ್ತಿದ್ದಾನೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಅದು ಇದರಲ್ಲಿ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಎರಡನೆಯದ್ದು, ತಾವು ಹೇಳಿದಂತೆ ೧೯೮೬ರಲ್ಲಿ ೬೫ ಕೇಸುಗಳು ಮತ್ತು ೧೯೮೭ರಲ್ಲಿ ೧೦೫ ಕೇಸುಗಳು ಇದ್ದರೂ ಸಹಿತ ಈ ವರದಕ್ಷಿಣೆ ಸಾವುಗಳ ವಿಷಯವಾಗಿ ತೀವ್ರಗತಿಯಿಂದ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಅನೇಕ ಸಲ ಸರ್ಕಾರ ದೃಢ ನಿಲುವನ್ನು ವ್ಯಕ್ತ ಮಾಡಿದ್ದೀರಿ. ಆದರೆ ಇಷ್ಟು ದಿನೇ ಆಗಲಿಕ್ಕೆ ನ್ಯಾಯಾಧೀಶರ ವಿಳಂಬ ಕಾರಣವೋ ಅಥವಾ ಪೋಲೀಸ್ ಅಧಿಕಾರಿಗಳು ಕೇಸ್ ಹಾಕುವುದರಲ್ಲಿ ತಡ ಮಾಡಿದ್ದಾರೆಯೇ ನ್ಯಾಯಾಧೀಶರಿಂದ ತಡವಾಗಿದ್ದರೆ ಸ್ಪೆಶಲ್ ಕೋರ್ಟ್ ನೇಮಕ ಮಾಡಿ ತೀವ್ರಗತಿಯಿಂದ ವಿಚಾರಣೆ ಆಗಲಿಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾವುದೇ ವರದಕ್ಷಿಣೆ ಸಾವು ಪ್ರಕರಣದಲ್ಲಿ ಸಿ.ಓ.ಡಿ.ಯಿಂದ ಎನ್‌ಕ್ವೈರಿ ಮಾಡುತ್ತೇವೆ. ಇದನ್ನು ಬಹಳ ವೇಗವಾಗಿಯೇ ಮಾಡುತ್ತಿದ್ದಾರೆ. ನ್ಯಾಯಾಲಯದಲ್ಲಿ ಕೇಸುಗಳು ಪೆಂಡಿಂಗ್ ಇವೆ. ಅದಷ್ಟು ಬೇಗ ಇವುಗಳನ್ನು ನಾನು ವಿಚಾರಣೆ ಮಾಡಿ ಇತ್ಯರ್ಥ ಮಾಡಲಿಕ್ಕೆ ನ್ಯಾಯಾಲಯವನ್ನು ನಮ್ಮ ವಕೀಲರ ಮುಂಖಾಂತರ ಕೇಳಿಕೊಳ್ಳುತ್ತೇವೆ. ಇನ್‌ವೆಸ್ಟಿಗೇಶನ್‌ನಲ್ಲಿ ಇದ್ದರೂ ಸಹಿತ ಅದಷ್ಟು ಬೇಗನೆ ಮಾಡಿಸುವುದಕೆ ಪ್ರಯತ್ನ ಮಾಡುತ್ತೇವೆ.